# 15. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ  ತರಲಘಟ್ಟ ಕ್ಯಾಂಪ್

ಈ ಶಾಲೆಯು ಶಿವಮೊಗ್ಗ ಮತ್ತು ಶಿಕಾರಿಪುರ ಜಿಲ್ಲಾ ಹೆದ್ದಾರಿಯ ಶಿಕಾರಿಪುರದಿಂದ ಕೇವಲ 7 ಕಿ.ಮೀ ದೂರ ವಿರುವ ಗ್ರಾಮ ತರಲಘಟ್ಟ ಕ್ಯಾಂಪ್, ನಮ್ಮ ಶಾಲೆಯು ಅತ್ಯಂತ ಸುಂದರವಾಗಿದ್ದು ಆಕರ್ಷಣೀಯವಾಗಿದೆ, ಒಟ್ಟು 2 ಕೊಠಡಿಗಳಿದ್ದು 2 ಜನ ಶಿಕ್ಷಕರನ್ನು ಒಳಗೊಂಡಿದೆ, ಒಂದರಿಂದ ಐದನೇ ತರಗತಿಯವರೆಗೆ ಇದ್ದು ಒಟ್ಟು 43 ಮಕ್ಕಳ ದಾಖಲಾತಿ ಇದೆ. ಒಂದು ಘಟಕವನ್ನು ಹೊಂದಿದ್ದು, 1 ಘಟಕದಲ್ಲಿ 29 ಮಕ್ಕಳು ಹಾಜರಾಗುತ್ತಾರೆ, ಈ ಘಟಕದಲ್ಲಿ ಶ್ರೀಮತಿ ಮೀನಾಕ್ಷಿ ಮುಖ್ಯೋಪಾಧ್ಯಾಯರು ಹಾಗೂ ಶ್ರೀಮತಿ ರೂಪಾ.ಟಿ. ಎಸ್ ಸಹಶಿಕ್ಷಕಿ ಇವರು ನಲಿಕಲಿ ತರಬೇತಿಯನ್ನು ಹೊಂದಿದ್ದು ಉತ್ತಮ ಅನುಕೂಲಿಸುವಿಕೆಯನ್ನು ಮಾಡುತ್ತಿದ್ದಾರೆ.







- ಕೊಠಡಿ ಸಿದ್ದತೆ: 1ನೇ ಘಟಕಕದ ಕೊಠಡಿಯು ಗಾಳಿ ಬೆಳಕಿನ ಉತ್ತಮ ವ್ಯವಸ್ಥೆಯಿಂದ ಕೂಡಿ ನೆಲಕ್ಕೆ ಟೈಲ್ಸ್ ಹಾಕಿಸಿದ ಕೊಠಡಿಯಾಗಿದೆ, 43 ಮಕ್ಕಳು ಕೂರವಷ್ಟು ವಿಶಾಲವಾಗಿದ್ದು ಕೂರಲು ರೌಂಡ್ ಟೇಬಲ್ & ಕುರ್ಚಿಗಳ ವ್ಯವಸ್ಥೆ ಇದ್ದು ಮಕ್ಕಳನ್ನು ಆಕರ್ಷಿಸುತ್ತದೆ.
- ವಾಲ್ ಸ್ಲೇಟ್: ಎಲ್ಲ ಮಕ್ಕಳಿಗೂ ವಾಲ್ ಸ್ಲೇಟ್ ನಲ್ಲಿ ಸ್ಥಳಾವಕಾಶ ಕಲ್ಪಿಸಲಾಗಿದ್ದು ಅವರುಗಳ ಹೆಸರುಗಳನ್ನು ನಮೂದಿಸಲಾಗಿದೆ, ಪ್ರತಿದಿನ ಮಕ್ಕಳು ಅದರ ಬಳಕೆ ಮಾಡುತ್ತಾರೆ.
- ಗೋಡೆ ಬರಹ: ನಲಿಕಲಿ ನಮ್ಮಘಟಕವು ವರ್ಣರಂಜಿತವಾಗಿದ್ದು ಮೂರುತರಗತಿಯ ಮಕ್ಕಳು ಕಲಿಯಬೇಕಾದ ಪ್ರಮುಖಾಂಶಗನ್ನು ಭಾಷೆ, ಗಣಿತ, ಪರಿಸರಅಧ್ಯಯನ, ಇಂಗ್ಲೀಷ್ ವಿಷಯವಾರುವಾಗಿ ಗೋಡೆಗಳ ಮೇಲೆ ದುಂಡಾಗಿ ನೀಟಾಗಿ ಬರೆಸಲಾಗಿದೆ, ಪ್ರತಿದಿನ ಮಕ್ಕಳು ಬಿಡುವಿನ ವೇಳೆಯಲ್ಲಿ ಅದನ್ನು ಓದಿ ಬರೆದು ಮನನ ಮಾಡುತ್ತಾರೆ.
- ಕಲಿಕಾ ಚಪ್ಪರ: ನಮ್ಮ ಕೊಠಡಿಯ ಕಲಿಕಾ ಚಪ್ಪರವು ಉತ್ತಮವಾಗಿದ್ದು ವಿಷಯವಾರು ಮಕ್ಕಳ ಚಟುವಟಿಕೆಗಳನ್ನು ಅಲ್ಲಿ ಪ್ರದರ್ಶಿಸಲಾಗಿದೆ, ಎಲ್ಲಾ ಮಕ್ಕಳೂ ಚಪ್ಪರದಲ್ಲಿ ತಮ್ಮನ್ನೂ ಗುರುತಿಸಿಕೊಳ್ಳುವಂತೆ ನಿಗಾ ವಹಿಸಲಾಗಿದೆ.
- ಪ್ರಗತಿ ನೋಟ: ತರಗತಿವಾರು ವಿಷಯವಾರು ಪ್ರಗತಿನೋಟಗಳನ್ನು ತೂಗೂ ಹಾಕಿದ್ದು ಅವು ಮಕ್ಕಳ ಕೈಗೆಟುಕುವಂತೆ ಜೋಡಿಸಲಾಗಿದೆ, ಪ್ರತಿದಿನ ಕಲಿಕೆಯಲ್ಲಿ ತೊಡಗಿದ ಮಕ್ಕಳು ನಿರಂತರ ಮೌಲ್ಯಮಾಪನದಡಿ ತಮ್ಮ ಪ್ರಗತಿಯನ್ನು ತಾವೇ ದಾಖಲಿಸಿಕೊಳ್ಳುತ್ತಾರೆ.

- ಹವಾಮಾನ ನಕ್ಷೆ: ಪರಿಸರ ಅಧ್ಯಯನ ಒಂದು ಪ್ರಮುಖ ಭಾಗವಾದ ಹವಾಮಾನ ನಕ್ಷೆಯ ದಾಖಲೀಕರಣ ಕ್ರೂಢೀಕರಣ ಸರಿಯಾದ ರೀತಿಯಲ್ಲಿ ಮಕ್ಕಳು ಶಿಕ್ಷಕರ ಮಾರ್ಗದರ್ಶನದಲ್ಲಿ ನಿರ್ವಹಿಸುತ್ತಾರೆ.
- ಕಾರ್ಡಗಳು & ವಾಚಕಗಳು: ಮೂರು ತರಗತಿಯ ಮಕ್ಕಳಿಗೆ ಕಾರ್ಡಗಳು, ವಾಚಕಗಳು ಕೈಗೆ ಸಿಗುವಂತೆ ರ್‍ಯಾಕಿನಲ್ಲಿ ವ್ಯವಸ್ಥಿತವಾಗಿ ವಿಷಯವಾರು ಜೋಡಿಸಲಾಗಿದೆ. ಮಕ್ಕಳು ತಾವೇ ಸ್ವತಃ ಮುಂದಿನ ಕಾರ್ಡಗಳನ್ನು ಎತ್ತಿಕೊಳ್ಳುತ್ತಾರೆ.
- ಕಲಿಕೋಪಕರಣಗಳು: ನಲಿಕಲಿ ಕಿಟ್ ವಿವಿಧಚಟುವಟಿಕೆಗಳ, ಮೈಲುಗಲ್ಲುವಾರು ಮಿಂಚಿನ ಪಟ್ಟಿಗಳ ಡಬ್ಬಿಗಳು, ವಿವಿಧ ಕಲಿಕೋಪಕರಣಗಳನ್ನು ಮಕ್ಕಳಿಗೆ ಸಿಗುವಂತೆ ಜೋಡಿಸಲಾಗಿದೆ, ಮಕ್ಕಳು ಬಳಸುತ್ತಾರೆ.
- ಸಿ.ಪಿ.ಎಫ್ ನಿರ್ವಹಣೆ: ಮಕ್ಕಳ ಕಲಿಕಾ ದಾಖಲೀಕರಣ ಮತ್ತು ದೃಢೀಕರಣಗಳೂ ಸಿ.ಪಿ.ಎಫ್ ನಲ್ಲಿ ತರಗತಿವಾರು ವಿಷಯವಾರು ನಡೆಯುತ್ತಿದ್ದು ರ್‍ಯಾಕಿನಲ್ಲಿ ವ್ಯವಸ್ಥಿತವಾಗಿ ಜೋಡಿಸಲಾಗಿದೆ.
- ಕಲಿಕಾ ತಟ್ಟೆಗಳು: ಮೂರು ವಿಷಯಗಳು ತಟ್ಟೆಗಳಿಗೆ ಸೂಕ್ತ ಸ್ಥಳಾವಕಾಶ ಕಲ್ಪಿಸಿದ್ದು ಮಕ್ಕಳೇ ಅದನ್ನು ಹಾಕಿ ನಿರ್ವಹಿಸುತ್ತಾರೆ.
- ಪೊಪೆಟ್ ಶೋ: ಪೊಪೆಟ್ ಶೋ ನ ಎಲ್ಲಾ ಉಪಕರಣ, ಪೊಪೆಟ್‌ಗಳೂ ಇದ್ದು ಸಂದರ್ಭಾನುಸಾರ ಬಳಸಲಾಗುತ್ತಿದೆ.
- ಅಭ್ಯಾಸ ಪುಸ್ತಕ: ಎಲ್ಲ ಮಕ್ಕಳಿಗೂ ಅಭ್ಯಾಸ ಪುಸ್ತಕವಿದ್ದು ಮಕ್ಕಳು ಅದನ್ನು ಸೂಕ್ತ ರೀತಿಯಲ್ಲಿ ನಿರ್ವಹಿಸಿ ಶಿಕ್ಷಕರ ಸಹಿ ಪಡೆಯುತ್ತಿದ್ದಾರೆ.
- ನಲಿಕಲಿ ಶಿಕ್ಷಕರ ಡೈರಿ: ಶಿಕ್ಷಕರು ಪ್ರತಿದಿನ ಮಕ್ಕಳ ಪ್ರಗತಿಯನ್ನು ಡೈರಿಯಲ್ಲಿ ನಮೂದಿಸಿಕೊಳ್ಳುತ್ತಿದ್ದಾರೆ.







Goat
Jug
Key
Nest
monkey
Orange
parrot
Rabbit
Ship
Cat
Fish
Ink
Lamp
Horse
Queen
Tree
Watch
Ball
Dog
Eat
Umbrella
Van
Xerox
Zebra
Apple
Yak
ನಲಿಕಲಿ





